1	2	3	4
	ಗೋಕಾಕ್ ತಾಲ್ಲೂಕು		
6.	ಗೋಕಾಕ್ ನಗರಸಭೆ	-	28,75,000
7.	ಕೊಣ್ಣೂರು ಪಟ್ಟಣ ಪಂಚಾಯಿತಿ	-	10,62,500
8.	ಮೂಡಲಗಿ ಪುರಸಭೆ	-	17,50,000
	ಹುಕ್ಕೇರಿ ತಾಲ್ಲೂಕು		
9.	ಹುಕ್ಕೇರಿ ಪಟ್ಟಣ ಪಂಚಾಯಿತಿ	10,00,000	5,62,500
10.	ಸಂಕೇಶ್ವರ ಪುರಸಭೆ	10,00,000	7,50,000
	ಖಾನಾಪುರ ತಾಲ್ಲೂಕು		
11.	ಖಾನಾಪುರ ಪಟ್ಟಣ ಪಂಚಾಯಿತಿ	-	5,62,500
	ರಾಯಬಾಗ್ ತಾಲ್ಲೂಕು		
12.	ರಾಯಬಾಗ್ ಪಟ್ಟಣ ಪಂಚಾಯಿತಿ	-	15,62,500
13.	ಕುಡುಚಿ ಪಟ್ಟಣ ಪಂಚಾಯಿತಿ	-	10,62,500
	ರಾಯದುರ್ಗ ತಾಲ್ಲೂಕು		
14.	ರಾಮದುರ್ಗ ಪುರಸಭೆ	-	17,50,000
	ಸವದತ್ತಿ ತಾಲ್ಲೂಕು		
15.	ಸವದತ್ತಿ ಪುರಸಭೆ	-	12,50,000
	ಬೆಳಗಾಂ ತಾಲ್ಲೂಕು		
16.	ಬೆಳಗಾಂ ಮಹಾನಗರಪಾಲಿಕೆ	-	30,00,000
	ಒಟ್ಟು	**40,00,000**	**2,28,75,000**

ರಾಜ್ಯದಲ್ಲಿ ನಬಾರ್ಡ ಹಾಗೂ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಒಳಚರಂಡಿ ಕೆಲಸ

813 (982) ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಬಾರ್ಡ್ ಹಾಗೂ ವಿಶ್ವಬ್ಯಾಂಕ್ ಯೋಜನೆಯ ಸಹಾಯದಿಂದ ಎಷ್ಟು ಒಳಚರಂಡಿ ಯೋಜನೆಗಳನ್ನು ತೆಗೆದು ಕೊಳ್ಳಲಾಗಿದೆ (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)

ಆ) ಯಾವ ಯಾವ ಸ್ಥಳಗಳಲ್ಲಿ ಒಳಚರಂಡಿ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ ಮುತ್ತ ಅವುಗಳ ಮೊತ್ತವೆಷ್ಟು?

ಇ) ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರದ ಒಳಚರಂಡಿ ಯೋಜನೆ ಯಾವ ಹಂತದಲ್ಲಿದೆ, ಹಾಗೂ ಹಿಂದಿನ ಮುಖ್ಯ ಮಂತ್ರಿಗಳು ಈ ವಿಷಯವನ್ನು ಸಚಿವ ಸಂಪುಟದ ಮುಂದೆ ತರಲು ಆದೇಶ ನೀಡಿದ್ದು ಆ ಆದೇಶದ ಮೇಲೆ ಯಾವ ಕ್ರಮವನ್ನು ಜರುಗಿಸಲಾಗಿದೆ.

ಈ) ಈ ಯೋಜನೆಗೆ ಎಷ್ಟು ಹಣ ಬೇಕಾಗುವುದು ಹಾಗೂ ಮಂಜೂರಾತಿಗಾಗಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಮತ್ತು ಎಷ್ಟು ದಿನಗಳಲ್ಲಿ ಮಂಜೂರಾತಿಯನ್ನು ನೀಡಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಯಾವುದೂ ಇಲ್ಲ

ಆ) ಪಟ್ಟಿ ಲಗತ್ತಿಸಲಾಗಿದೆ

ಇ) ಬೈಲಹೊಂಗಲ ಪಟ್ಟಣಕ್ಕೆ ರೂ. 589.00 ಲಕ್ಷಗಳ ಒಳಚರಂಡಿ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸದರಿ ಅಂಡರ್‌ಡಜಿಗೆ ಪುರಸಭೆಯ ವಂತಿಗೆ ಹಣವನ್ನು ತುಂಬಿದ ನಂತರ ಮಂಜೂರಾತಿ ನೀಡುವುದೆಂದು ಅಭಿಪ್ರಾಯ ಪಡಲಾಗಿದೆ. ಇಲ್ಲಿಯವರೆಗೆ ಪುರಸಭೆಯು ವಂತಿಗೆ ಹಣ ತುಂಬಿರುವುದಿಲ್ಲ.

ಈ) ರೂ. 589.00 ಲಕ್ಷ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ತೆಗೆದುಕೊಂಡಿರುವ ಒಳಚರಂಡಿ ಯೋಜನೆಗಳು

	ಪಟ್ಟಣ	ಅಂದಾಜು ವೆಚ್ಚ ರೂ. ಲಕ್ಷಗಳು
1.	ಶಿಡ್ಲಘಟ್ಟ	374.81
2.	ಹಾಸನ	1224.00
3.	ಹೊಳೆನರಸೀಪುರ	250.00
4.	ಗುಲ್ಬರ್ಗಾ 2ನೇ ಹಂತ	1329.00
5.	ಬಳ್ಳಾರಿ	5753.55

6.	ಗದಗ-ಬೆಟಗೇರಿ	1114.66
7.	ಬನ್ನೂರು	523.26
8.	ತುಮಕೂರು (ಎಡಿಬಿ ಸಹಾಯದಿಂದ)	2172.00
9.	ರಾಮನಗರ (ಎಡಿಬಿ ಸಹಾಯದಿಂದ)	593.00
10.	ಮೈಸೂರು (ಎಡಿಬಿ ಸಹಾಯದಿಂದ)	4775.00

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಂತರ್ಜಲ ವೃದ್ಧಿ ಯೋಜನೆ

814 (984) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವ ವಿಶೇಷಯೋಜನೆಯನ್ನು ಹಮ್ಮಿಕೊಳ್ಳಲಾಗುವುದೆಂಬ ಸಂಗತಿ ನಿಜವೆ?

ಆ) ಹಾಗಿದ್ದಲ್ಲಿ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ? ಇದಕ್ಕೆ ತಗಲುವ ವೆಚ್ಚವೆಷ್ಟು?

ಇ) ಬೆಳಗಾವಿ ಜಿಲ್ಲೆಯಲ್ಲಿ ಅಂತರ್ಜಲ ಹೆಚ್ಚಿಸಲು ಯಾವ ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು?

ಈ) ಬೆಳಗಾವಿ ಜಿಲ್ಲೆ ಬೈಲಹೊಂಗಲ, ಹುಕ್ಕೇರಿ ಚಿಕ್ಕೋಡಿ, ಸವದತ್ತಿ ಹಾಗೂ ಅಥಣಿ ತಾಲ್ಲೂಕುಗಳಲ್ಲಿ ಅಂತರ್ಜಲ ಕಡಿಮೆಯಾಗಿದ್ದು ಕಪ್ಪು ಪ್ರದೇಶವೆಂದು ಘೋಷಿಸಿದ್ದರಿಂದ ಇಲ್ಲಿ ಅಂತರ್ಜಲ ಹೆಚ್ಚಿಸಲು ಯಾವ ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ) ಹೌದು

ಆ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಂತರ್ಜಲವನ್ನು ಹೆಚ್ಚಿಸುವ ಸಲುವಾಗಿ ಜಲ ಸಂಪನ್ಮೂಲ ಕ್ರೋಢೀಕರಣ ಯೋಜನೆ (Water Resource Consolidation Project Groundwater Component) ಅಡಿಯಲ್ಲಿ ರೂ.850 ಕೋಟಿ ವೆಚ್ಚದ ಒಂದು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ತದನಂತರ ಕಾವೇರಿ ಜಲಾನಯನ ಪ್ರದೇಶ ಹಾಗೂ ಇತರೆ ಇಲಾಖೆಗಳಿಂದ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು ಅತಿ ವ್ಯಾಪ್ತ (Overlap) ವಾಗುವ ಪ್ರದೇಶಗಳನ್ನು ಹೊರತುಪಡಿಸಿ 58 ತಾಲ್ಲೂಕುಗಳಲ್ಲಿ 50.221 ಅಂತರ್ಜಲ, ಕೃತಕ ಮರುಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಲು ರೂ.471 ಹಮ್ಮಿಕೊಳ್ಳಲಾಗಿದೆ.